ಕ್ರ.ಸಂ. ನಸಶಿ/ತೆ.ವಿ./ಕಟ್ಟೆ ಪರವಾನಿಗೆ/ವಿವ-1/2009-10 ನಗರಸಭಾ ಕಾರ್ಯಾಲಯ,
ಶಿರಸಿ, ದಿನಾಂಕ: 03.08.2009.

# ಮೀನು ಮಾರ್ಕೇಟಿನ ಮೀನು ಕಟ್ಟೆ ಟೆಂಡರು ಕಂ ಹರಾಜು ಪ್ರಕಟಣೆ

ಶಿರಸಿ ನಗರಸಭೆಯ ವ್ಯಾಪ್ತಿಯಲ್ಲಿ ಸ.ನಂ. 1334 ರಿಂದ 1357 ರಲ್ಲಿ ಕುಡ್ಸೆಂಪ್ ಯೋಜನೆಯಡಿ ನಿರ್ಮಿಸಿದ ಮೀನು ಮಾರುಕಟ್ಟೆ ಸಂಕೀರ್ಣದಲ್ಲಿ 11 ರಿಂದ 48 ಮೀನು ಮಾರುಕಟ್ಟೆ ಕಟ್ಟೆಗಳನ್ನು ದಿನಾಂಕ: 01-09-2009 ರಿಂದ ಪರವಾನಿಗೆ ಶುಲ್ಕದ ಆಧಾರದ ಮೇಲೆ 11 ತಿಂಗಳ ಅವಧಿಗೆ ನೀಡಲು ನಗರಸಭೆ ನಿರ್ಧರಿಸಿದ್ದು, ಕಾರಣ ಈ ನಗರಸಭೆಯಿಂದ ಟೆಂಡರು ಕಂ ಹರಾಜು ಮೂಲಕ ವಿಲೇ ಮಾಡಲಾಗುವುದು. ಟೆಂಡರು ಕಂ ಹರಾಜಿನಲ್ಲಿ ಬಾಗವಹಿಸಲಿಚ್ಛಿಸುವವರು ದಿನಾಂಕ: 13-08-2009 ರಂದು ಬೆಳಿಗ್ಗೆ 11:00 ಗಂಟೆಗೆ ನಡೆಯುವ ಟೆಂಡರು ಕಂ ಹರಾಜಿನಲ್ಲಿ ಭಾಗವಹಿಸಬಹುದು. **ಸ್ಥಳ: ನಗರಸಭೆ ಸಭಾ ಭವನ,** ಸಿರಸಿ. ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಕಂದಾಯ ಅಧಿಕಾರಿಗಳನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

## ಟೆಂಡರು ಕಂ ಹರಾಜು ನಡೆಯುವ ದಿನಾಂಕ ಮತ್ತು ಸಮಯ ಈ ಕೆಳಗಿನಂತೆ ಇರುತ್ತದೆ:

1. ಟೆಂಡರು ಫಾರ್ಮ ನೀಡುವ ದಿನಾಂಕ : 03-08-2009 ಬೆಳಿಗ್ಗೆ 10:15 ರಿಂದ 5:30 ರವರೆಗೆ.
2. ಟೆಂಡರು ತುಂಬಿದ ಫಾರ್ಮ ಟೆಂಡರು ಬಾಕ್ಸಿನಲ್ಲಿ ಹಾಕುವ ದಿನಾಂಕ : 13-08-2009 ಬೆಳಿಗ್ಗೆ: 11:00 ಗಂಟೆಗೆ.
3. ಟೆಂಡರು ಫಾರ್ಮ ಬೆಲೆ ರೂ. :100-00.
4. ಹರಾಜು ನಡೆಸುವ ದಿನಾಂಕ : 13-08-2009, ಸಮಯ: ಬೆಳಿಗ್ಗೆ: 11:45 ಗಂಟೆಗೆ

ಸ್ಥಳ ಹಳೇ ಬಸ್ ನಿಲ್ದಾಣದ ಹಿಂಭಾಗದಲ್ಲಿ ನಿರ್ಮಿಸಿದ ಮೀನು ಕಟ್ಟೆಗಳು

| ಕ್ರ.ಸಂ. | ಮೀನು ಮಾರಾಟದ ಕಟ್ಟೆಗಳು | ಅಳತೆಗಳು (ಘುಟುಗಳಲ್ಲಿ) | ಪ್ರತಿ ಕಟ್ಟೆಗೆ ಠೇವಣಿ |
|---|---|---|---|
| 1 | ಕಟ್ಟೆ ಸಂಖ್ಯೆ – 11 ರಿಂದ 48 ರವರೆಗೆ | 8'x7' | 5,000-00 |

*ಶರ್ತುಗಳು:-*

1. ಟೆಂಡರಿನಲ್ಲಿ ಭಾಗವಹಿಸುವವರು 18 ವರ್ಷಕ್ಕಿಂತ ಮೇಲ್ಪಟ್ಟವರು ಇರಬೇಕು.
2. ಹರಾಜಿನಲ್ಲಿ ಪಡೆದ ಕಟ್ಟೆಯನ್ನು ಮರು-ಪರವಾನಿಗೆ (ಸಬ್ ಲೀಸ್) ಮೇಲೆ ನೀಡಬಾರದು ಮತ್ತು ಸಾಲ ತಗೆಯಬಾರದು. ಕಟ್ಟೆಯಲ್ಲಿ ಕಾನೂನು ಬಾಹಿರ ವ್ಯವಹಾರ ಮಾಡಬಾರದು. ಹಾಗೇನಾದರೂ ಮಾಡಿದ್ದಲ್ಲಿ ಸದ್ರಿ ಕಟ್ಟೆಯನ್ನು ನಗರಸಭೆಯ ವಶಕ್ಕೆ ಪಡೆಯಲಾಗುವುದು.
3. ವ್ಯಾಪಾರ ಮಾಡಲು ಕಟ್ಟೆಯ ಯಾವುದೇ ಭಾಗ ಬದಲಾವಣೆ ಮಾಡಬಾರದು.
4. ಯಾವುದೇ ಕಾರಣ ನೀಡದೇ ಟೆಂಡರು ಕಂ ಹರಾಜು ಸ್ಥಗಿತಗೊಳಿಸುವ ಅಥವಾ ನಿರಾಕರಿಸುವ ಅಧಿಕಾರ ನಗರಸಭೆಯು ಕಾಯ್ದಿರಿಸಿಕೊಂಡಿದೆ.
5. ಯಾವುದೇ ಸಿವಿಲ್, ಕ್ರಿಮಿನಲ್ ವ್ಯಾಜ್ಯಗಳಿಗೆ ನಗರಸಭೆ ಬಾದ್ಯಸ್ಥ ಆಗುವುದಿಲ್ಲ.
6. ಠೇವಣಿ ಹಣವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ಇವರ ಹೆಸರಿಗೆ ಡಿ.ಡಿ. ಮೂಲಕ ಸಲ್ಲಿಸತಕ್ಕದ್ದು.
7. ಕಟ್ಟೆಯ ಪರವಾನಿಗೆ ಫೀಯನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ತುಂಬತಕ್ಕದ್ದು.
8. ಮದ್ಯ ವ್ಯಾಪಾರವನ್ನು ಕಟ್ಟೆಯಲ್ಲಿ ನಡೆಸಬಾರದು.
9. ಲಿವ್ ಎಂಡ್ ಲೈಸನ್ಸ ಫೀ 11 ತಿಂಗಳ ನಂತರ ಕಟ್ಟೆ ಖುಲ್ಲಾಪಡಿಸುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ.
10. ಈಗಾಗಲೇ ಈ ಮಾರುಕಟ್ಟೆಯಲ್ಲಿ ವ್ಯಾಪಾರ ನಡೆಸುತ್ತಿರುವ ವ್ಯಾಪಾರಸ್ಥರು ಬಾಕಿ ಪಾವತಿಸುವವರೆಗೆ ಟೆಂಡರು ಕಂ ಹರಾಜಿನಲ್ಲಿ ಭಾಗವಹಿಸಲು ಬರಲಾರದು.
11. ವಿದ್ಯುಚ್ಛಕ್ತಿ ಬಿಲ್ಲನ್ನು ಸಂಬಂಧಿಸಿದ ಮೀನು ವ್ಯಾಪಾರಸ್ಥರೇ ತುಂಬತಕ್ಕದ್ದು.
12. ಮೀನು ಕಟ್ಟೆ ಮಂಜೂರು ಆದವರು ರೂ. 50-00 ರ ಛಾಪಾ ಕಾಗದದಲ್ಲಿ ಕರಾರು ಪತ್ರ ಬರೆದುಕೊಡತಕ್ಕದ್ದು.
13. ಒಂದು ಠೇವಣಿ ತುಂಬಿ ಒಂದು ಕಟ್ಟೆ ಪಡೆದಲ್ಲಿ ಮತ್ತೊಂದು ಕಟ್ಟೆ ಭಾಗವಹಿಸುವುದಾದರೆ ಪ್ರತ್ಯೇಕ ಠೇವಣಿ ತುಂಬತಕ್ಕದ್ದು.
14. ಕಟ್ಟೆ ಮಂಜೂರು ಪಡೆದವರು 2 ಫೋಟೋ ನೀಡತಕ್ಕದ್ದು.